# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **304** |
| ಉತ್ತರಿಸಬೇಕಾದ ದಿನಾಂಕ | : | 15.02.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಯಡಿ Not OK ಸ್ಥಿತಿಯಿಂದಾಗಿ ಅನುದಾನ ಬಿಡುಗಡೆಯಾಗದ ಪ್ರಕರಣಗಳೆಷ್ಟು; (ತಾಲ್ಲೂಕುವಾರು ಪ್ರಕರಣಗಳ ಸಂಖ್ಯೆಯನ್ನು ನೀಡುವುದು) | ರಾಜೀವ್ ಗಾಂಧಿ ವಸತಿ ನಿಗಮವು ಪ್ರತಿ ವಾರ ಅರ್ಹ ಫಲಾನುಭವಿಗಳ ಜಿಪಿಎಸ್ ಭೌತಿಕ ಪ್ರಗತಿಯನ್ನು ಆಧರಿಸಿ ಅನುದಾನವನ್ನು ನೇರವಾಗಿ ಫಲಾನುಭವಿಗಳ ಆಧಾರ್ ಆಧಾರಿತ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡುತ್ತಿದೆ. ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡಲು ಯಾವುದೇ ಬಾಕಿ ಇರುವುದಿಲ್ಲ. ಆದರೆ ಜಿಪಿಎಸ್ ಆಧಾರಿತ ಭೌತಿಕ ಪ್ರಗತಿಯನ್ನು ಪರಿಶೀಲಿಸುವಾಗ ಈ ಕೆಳಕಂಡ ಕಾರಣಗಳಿಂದ ತಾತ್ಕಾಲಿಕವಾಗಿ ಫಲಾನುಭವಿಗಳ ಅನುದಾನ ಬಿಡುಗಡೆಯನ್ನು ತಡೆಹಿಡಿಯಲಾಗಿದೆ.<br><br>1. ನಿಗದಿಪಡಿಸಿದ ಘಟಕವೆಚ್ಚ ಮೀರಿ ನಿರ್ಮಿಸಿದ ಮನೆ<br>2. ಮನೆ ವಿಸ್ತರಣೆ<br>3. ಹಳೇ ಮನೆ ಅಥವಾ ಹಂತವಾರು ಛಾಯಾ ಚಿತ್ರಗಳ ಅವಶ್ಯಕತೆ<br>4. ವಸತಿಯೇತರ ಉದ್ದೇಶಕ್ಕಾಗಿ ನಿರ್ಮಿಸಿ ಕೊಂಡಿರುವುದು.<br><br>ವಿವಿಧ ವಸತಿ ಯೋಜನೆಗಳಡಿ 2010-11 ನೇ ಸಾಲಿನಿಂದ ಇಲ್ಲಿಯವರೆಗೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಯಡಿ NOT OK ಸ್ಥಿತಿಯಿಂದಾಗಿ ಒಟ್ಟು 3359 ಮನೆಗಳನ್ನು ತಡೆಹಿಡಿಯಲಾಗಿದ್ದು, ವಿವರ ಕೆಳಕಂಡಂತಿದೆ. |

| ತಾತ್ಕಲಿಕವಾಗಿ ತಡೆಹಿಡಿಯಲಾಗಿರುವ ಕಾರಣಗಳು | ಉಡುಪಿ | ದಕ್ಷಿಣ ಕನ್ನಡ | ಒಟ್ಟು |
|---|---|---|---|
| ಮನೆ ವಿಸ್ತರಣೆ: | 61 | 109 | 170 |
| ಹಳೇ ಮನೆ | 9 | 23 | 32 |
| ವಸತಿಯೇತರ ಉದ್ದೇಶಕ್ಕಾಗಿ ನಿರ್ಮಿಸಿರುವುದು | 5 | 6 | 11 |
| ನಿಗದಿಪಡಿಸಿದ ಘಟಕವೆಚ್ಚ ಮೀರಿ ನಿರ್ಮಿಸಿದ ಮನೆ ಕೊಂಡಿರುವುದು | 295 | 423 | 718 |
| ಹಂತವಾರು ಛಾಯಾ ಚಿತ್ರಗಳ ಅವಶ್ಯಕತೆ | 1282 | 1146 | 2428 |
| ಒಟ್ಟು | 1652 | 1707 | 3359 |

| | | |
|---|---|---|
| | | ತಾಲ್ಲೂಕುವಾರು ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಮೇಲೆ ತಿಳಿಸಿದ ಪ್ರಕರಣಗಳಲ್ಲಿ ಒಂದು ವೇಳೆ ವಾಸ್ತವಿಕವಾಗಿ ನಿರ್ಮಾಣ ಗೊಂಡಿರುವ ಮನೆಯು ಅರ್ಹವಿರುವುದು ಕಂಡುಬಂದಲ್ಲಿ, ಸ್ಥಳೀಯ ಸಂಸ್ಥೆ/ತಾಲ್ಲೂಕು ಮಟ್ಟದ ಅಧಿಕಾರಿಗಳ ದೃಢೀಕರಣದೊಂದಿಗೆ, ನಿಗದಿತ ನಮೂನೆಯಲ್ಲಿ ಪ್ರಸ್ತಾವನೆಯನ್ನು ಜಿಲ್ಲಾಡಳಿತವು ಆನ್‌ಲೈನ್ ಮೂಲಕ ನಿಗಮಕ್ಕೆ ಸಲ್ಲಿಸಿದಲ್ಲಿ, ನಿಯಮಾನುಸಾರ ಅನುದಾನ ಬಿಡುಗಡೆಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಅದರಂತೆ ಜಿಲ್ಲಾಡಳಿತದಿಂದ ತಾತ್ಕಾಲಿಕವಾಗಿ ತಡೆಹಿಡಿಯಲಾದ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅರ್ಹಗೊಳಿಸಿ ಅನುದಾನ ಬಿಡುಗಡೆಗೊಳಿಸಲಾಗಿದೆ. |
| ಆ) | ಅನೇಕ ಪ್ರಕರಣಗಳಲ್ಲಿ ವಾಸಕ್ಕಾಗಿ ಹಳೆ ಮನೆಯ ಒಂದು ಕೋಣೆಯನ್ನು ಹೊರತುಪಡಿಸಿ ಉಳಿದ ಕಟ್ಟಡವನ್ನು ಕೆಡವಿ ತಳಪಾಯ ಮಾಡಿದ್ದರೂ ಸಹ ಅಡಿಟ್‌ನಲ್ಲಿ ಹಳೆಮನೆ ವಿಸ್ತರಣೆಯ ಹೆಸರಿನಲ್ಲಿ Not OK ಕಾರಣ ನೀಡಿ ಅನುದಾನ ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮನೆ ವಿಸ್ತರಣೆಯೆಂದು ತಡೆಹಿಡಿಯಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಜಿಲ್ಲೆಗಳಿಂದ ನಿಗದಿಪಡಿಸಿದ ನಮೂನೆಯಲ್ಲಿ ಪ್ರಸ್ತಾವನೆ online ಮೂಲಕ ಪಡೆದು ಪರಿಶೀಲಿಸಿ ಈಗಾಗಲೇ ನಿರ್ಮಿಸಿರುವ ಮನೆಗೆ ಹೊಂದಿಕೊಂಡಂತೆ ಮನೆ ನಿರ್ಮಿಸಿಕೊಳ್ಳದೇ ಹಳೆ ಮನೆಯನ್ನು ಕೆಡವಿ ಮನೆ ನಿರ್ಮಿಸಿಕೊಳ್ಳುತ್ತಿರುವ ಪ್ರಕರಣಗಳನ್ನು ಪರಿಶೀಲಿಸಿ ಅರ್ಹಗೊಳಿಸಿ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ. |
| ಇ) | ಕೆಲವೊಮ್ಮೆ ತಳಪಾಯದ ಹಂತವನ್ನು OK ಮಾಡಿ ಮುಂದಿನ NOT OK ಕಾರಣ ನೀಡಿ ಅನುದಾನ ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿಯ ಎಷ್ಟು ಪ್ರಕರಣಗಳು ಅನುದಾನ ಬಿಡುಗಡೆಗೆ ಬಾಕಿಯಿದೆ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ತಳಪಾಯದ ಹಂತವನ್ನು OK ಮಾಡಿದ ನಂತರ ನಿರ್ಮಿಸಿಕೊಳ್ಳಲಾಗುತ್ತಿರುವ ಮನೆಯು ಸರ್ಕಾರ ನಿಗದಿಪಡಿಸಿರುವ ಸಹಾಯಧನದ ನಾಲ್ಕು ಪಟ್ಟು ಮೀರಿ ಹೆಚ್ಚಿನ ಅನುದಾನ ವಿನಿಯೋಗಿಸಿ (8 ಲಕ್ಷಕ್ಕೂ ಮೀರಿ) ಮನೆ ನಿರ್ಮಿಸುತ್ತಿದ್ದಲ್ಲಿ ಮಾತ್ರ High cost ಕಾರಣ ನೀಡಿ ತಾತ್ಕಾಲಿಕವಾಗಿ ತಡೆಹಿಡಿಯಲಾಗುತ್ತಿದೆ. ಇಂತಹ ಮನೆಗಳನ್ನು ಸಹಾ ತಾಲ್ಲೂಕು ಮಟ್ಟದ ಕಿರಿಯ ಅಭಿಯಂತರರ ವರದಿ ಆಧಾರದ ಮೇಲೆ ಪ್ರಸ್ತಾವನೆಯನ್ನು online ಮೂಲಕ ಪಡೆದು ಪರಿಶೀಲಿಸಿ ಅರ್ಹವಿದ್ದಲ್ಲಿ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ. |
| ಈ) | ಗ್ರಾಮಾಂತರ ಪ್ರದೇಶದಲ್ಲಿ NOT OK ಪ್ರಕರಣಗಳಿಗೆ ತಾಲ್ಲೂಕು ಮಟ್ಟದ ಅಧಿಕಾರಿ ದೃಢೀಕರಣ ಮಾಡಿ, ಜಿಲ್ಲಾ ಪಂಚಾಯತ್ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ನಿಗಮದಿಂದ ಅನುದಾನ ಬಿಡುಗಡೆ ಮಾಡುವ ಸುದೀರ್ಘ ಪ್ರಕ್ರಿಯೆಯ ಬದಲು ವಸತಿ ಇಲಾಖೆಯ ನೋಡಲ್ ಅಧಿಕಾರಿಗಳಿಗೆ ಅಧಿಕಾರ ನೀಡಬಹುದಾಗಿದೆ; ಈ ಬಗ್ಗೆ ಸರ್ಕಾರದ ನಿಲುವೇನು; | ಗ್ರಾಮಾಂತರ ಪ್ರದೇಶದಲ್ಲಿ NOT OK ಪ್ರಕರಣಗಳಿಗೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿ ದೃಢೀಕರಣ ಮಾಡಿ, ಜಿಲ್ಲಾಪಂಚಾಯತ್ ಮೂಲಕ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br><br>ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿ ಜೊತೆಗೆ ಪ್ರತಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ನೇಮಿಸಲಾಗಿರುವ ತಾಲ್ಲೂಕು ಮಟ್ಟದ ಅಧಿಕಾರಿಯು ಸಹಾ ಪ್ರಕರಣಗಳನ್ನು ಪರಿಶೀಲಿಸಿ, ದೃಢೀಕರಿಸಿ ಪ್ರಸ್ತಾವನೆಯನ್ನು ನಿಗಮಕ್ಕೆ ಸಲ್ಲಿಸುವ ಅಧಿಕಾರವನ್ನು ಈಗಾಗಲೇ ನೀಡಲಾಗಿರುತ್ತದೆ. |

| | | |
|---|---|---|
| ಉ) | ವಿಕೇಂದ್ರೀಕರಣ ವ್ಯವಸ್ಥೆಯಡಿ ವಸತಿ ಯೋಜನೆಯ ಸಮರ್ಪಕ ನಿರ್ವಹಣೆಗಾಗಿ ತಾಲ್ಲೂಕು ಪಂಚಾಯತಿಯಲ್ಲಿ ಸಹಾಯಕ ನಿರ್ದೇಶಕರ (ಗ್ರಾಮೀಣ ವಸತಿ) ಹುದ್ದೆಯನ್ನು ಸೃಜಿಸಿ, ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ ಪದೋನ್ನತಿ ಮೂಲಕ ನೇಮಕಾತಿ ಮಾಡಬಹುದಾಗಿದ್ದು, ಈ ಬಗ್ಗೆ ಸರ್ಕಾರದ ಕ್ರಮವೇನು ? | ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನಕ್ಕೆ ಪ್ರತಿ ತಾಲ್ಲೂಕು ಪಂಚಾಯತ್‌ಗೆ ತಲಾ ಒಂದು ಸಹಾಯಕ ನಿರ್ದೇಶಕ (ಗ್ರಾಮೀಣ ಉದ್ಯೋಗ) ಹುದ್ದೆಯನ್ನು 2011 ರಲ್ಲಿ ಸೃಜಿಸಲಾಗಿದೆ. ಇದನ್ನು ಹೊರತುಪಡಿಸಿ, ಗ್ರಾಮ ಪಂಚಾಯತಿಗಳು ಅನುಷ್ಠಾನಗೊಳಿಸುವ ಇತರೆ ಎಲ್ಲಾ ಯೋಜನೆಗಳು (ವಸತಿ ಯೋಜನೆಯು ಒಳಗೊಂಡಂತೆ) ಸಮಗ್ರ ಮೇಲ್ವಿಚಾರಣೆ ಮಾಡುವ ಉದ್ದೇಶಕ್ಕಾಗಿ ತಾಲ್ಲೂಕು ಪಂಚಾಯತ್ ಹಂತದಲ್ಲಿ ಹೊಸದಾಗಿ ತಲಾ ಒಂದು ಸಹಾಯಕ ನಿರ್ದೇಶಕ(ಯೋಜನೆ ಮತ್ತು ಅಭಿವೃದ್ಧಿ) ಎಂಬ ಪದನಾಮದ ಹುದ್ದೆ ಮತ್ತು ತಾಲ್ಲೂಕು ಪಂಚಾಯತಿಯ ಇತರೆ ಆಡಳಿತಾತ್ಮಕ ವಿಷಯಗಳ ಮೇಲುಸ್ತುವಾರಿಗೆ ಸಹಾಯಕ ನಿರ್ದೇಶಕ(ಆಡಳಿತ) ಎಂಬ ಪದನಾಮದ ತಲಾ ಒಂದು, ಒಟ್ಟು ಪ್ರತಿ ತಾಲ್ಲೂಕು ಪಂಚಾಯತಿಗೆ ತಲಾ ಎರಡು ಹೆಚ್ಚುವರಿ ಸಹಾಯಕ ನಿರ್ದೇಶಕ ಹುದ್ದೆಗಳನ್ನು ಸೃಜನೆ ಮಾಡುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಸಹಮತಿಗೆ ಮಂಡಿಸಲಾಗಿತ್ತಾದರೂ, ಆರ್ಥಿಕ ಇಲಾಖೆಯು ಕೇವಲ ಒಂದು ಸಹಾಯಕ ನಿರ್ದೇಶಕ ಹುದ್ದೆಯನ್ನು ಸೃಜನೆ ಮಾಡಲು ಸಹಮತಿಸಿದ್ದನ್ನು ಅನುಸರಿಸಿ, ಅವಶ್ಯಕತೆಗನುಗುಣವಾಗಿ ಸದರಿ ಹುದ್ದೆಯನ್ನು ಸಹಾಯಕ ನಿರ್ದೇಶಕ(ಪಂಚಾಯತ್ ರಾಜ್) ಎಂಬ ಪದನಾಮದೊಂದಿಗೆ ದಿನಾಂಕ:31.05.2021 ರಂದು ಸೃಜನೆ ಮಾಡಿ, ಸದರಿ ಹುದ್ದೆಗೆ ದಿನಾಂಕ:17.08.2021 ರಂದು ಕಾರ್ಯಹಂಚಿಕೆ ಮಾಡಲಾಗಿದೆ.<br><br>ಆರ್ಥಿಕ ಇಲಾಖೆಯು ಪ್ರತಿ ತಾಲ್ಲೂಕಿಗೆ ಮತ್ತೊಂದು ಸಹಾಯಕ ನಿರ್ದೇಶಕ ಹುದ್ದೆಯನ್ನು ಸೃಜಿಸಲು ಸಹಮತಿಸದ ಕಾರಣ ತಾಲ್ಲೂಕು ಪಂಚಾಯತ್ ಹಂತದಲ್ಲಿ ಇತರೆ ಯೋಜನೆಗಳ ಮೇಲ್ವಿಚಾರಣೆಗೆ (ವಸತಿ ಯೋಜನೆಯನ್ನು ಒಳಗೊಂಡಂತೆ) ಸಹಾಯ ನಿರ್ದೇಶಕರ ಹುದ್ದೆಯನ್ನು ಸೃಜಿಸುವ ಪ್ರಸ್ತಾಪ ಇರುವುದಿಲ್ಲ. ಇದರಿಂದಾಗಿ, ಸದರಿ ಹುದ್ದೆಗೆ ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಂದ ಪದೋನ್ನತಿ ಮೂಲಕ ನೇಮಕಾತಿ ಪ್ರಶ್ನೆ ಉದ್ಭವವಾಗಿರುವುದಿಲ್ಲ ಎಂದು ಗ್ರಾಮೀಣ ಮತ್ತು ಪಂಚಾಯತ್ ರಾಜ್ ಇಲಾಖೆಯವರು ತಿಳಿಸಿರುತ್ತಾರೆ. |

ಸಂಖ್ಯೆ :ವಇ 50 ಹೆಚ್‌ಎಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

| LCQ-304 | | | | | | | | ಅನುಬಂಧ |
|---|---|---|---|---|---|---|---|---|
| ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಯಡಿ 2010-11ನೇ ಸಾಲಿನಿಂದ ಇಲ್ಲಿಯವರೆಗೆ Not OK ಪ್ರಕರಣಗಳ ವಿವರ | | | | | | | | |
| **Area** | **District** | **Taluk** | **House Extension** | **Old House** | **Non Residential** | **High Cost** | **ReqStageWise Photos** | **Foundation Required for Unblocked houses** |
| Rural | DakshinaKannada | Bantwal | 32 | 9 | 2 | 113 | 430 | 4 |
| Rural | DakshinaKannada | Belthangadi | 37 | 4 | 2 | 66 | 192 | 3 |
| Rural | DakshinaKannada | Kadaba | 3 | 0 | 0 | 25 | 41 | 1 |
| Rural | DakshinaKannada | Mangaluru | 6 | 4 | 0 | 39 | 113 | 2 |
| Rural | DakshinaKannada | Mudabidre | 2 | 2 | 0 | 21 | 48 | 0 |
| Rural | DakshinaKannada | Mulki | 3 | 0 | 1 | 3 | 22 | 1 |
| Rural | DakshinaKannada | Puttur | 4 | 0 | 1 | 22 | 24 | 0 |
| Rural | DakshinaKannada | Sullia | 6 | 0 | 0 | 14 | 57 | 1 |
| Rural | DakshinaKannada | Ullal | 12 | 3 | 0 | 57 | 134 | 2 |
| Urban | DakshinaKannada | Bajpe TP | 0 | 0 | 0 | 0 | 1 | 0 |
| Urban | DakshinaKannada | Bantwal TMC | 0 | 0 | 0 | 10 | 3 | 0 |
| Urban | DakshinaKannada | Belthangadi TP | 0 | 0 | 0 | 1 | 2 | 0 |
| Urban | DakshinaKannada | Kadaba TP | 0 | 0 | 0 | 0 | 0 | 0 |
| Urban | DakshinaKannada | Kinnigoli TP | 1 | 0 | 0 | 0 | 1 | 0 |
| Urban | DakshinaKannada | Kotekaru TP | 0 | 0 | 0 | 0 | 0 | 0 |
| Urban | DakshinaKannada | Mangaluru CC | 1 | 0 | 0 | 28 | 33 | 1 |
| Urban | DakshinaKannada | Mudubidre TMC | 1 | 0 | 0 | 1 | 1 | 0 |
| Urban | DakshinaKannada | Mulki TP | 0 | 0 | 0 | 3 | 3 | 0 |
| Urban | DakshinaKannada | Puttur TMC | 1 | 0 | 0 | 3 | 5 | 0 |
| Urban | DakshinaKannada | Someshwara | 0 | 0 | 0 | 0 | 3 | 0 |
| Urban | DakshinaKannada | Sullia TP | 0 | 1 | 0 | 0 | 5 | 0 |
| Urban | DakshinaKannada | Ullal TMC | 0 | 0 | 0 | 17 | 13 | 0 |
| Urban | DakshinaKannada | Vitla TP | 0 | 0 | 0 | 0 | 0 | 0 |
| | **DakshinaKannada Total** | | **109** | **23** | **6** | **423** | **1131** | **15** |
| Urban | Udupi | Bynduru TP | 0 | 0 | 0 | 0 | 0 | 0 |
| Urban | Udupi | Kapu TMC | 0 | 0 | 0 | 1 | 2 | 2 |
| Urban | Udupi | Karkala TMC | 0 | 0 | 0 | 0 | 4 | 0 |

| Area | District | Taluk | House Extension | Old House | Non Residential | High Cost | ReqStageWise Photos | Foundation Required for Unblocked houses |
|---|---|---|---|---|---|---|---|---|
| Urban | Udupi | Kundapura TMC | 0 | 0 | 0 | 0 | 2 | 2 |
| Urban | Udupi | Saligrama TP | 0 | 0 | 0 | 3 | 19 | 0 |
| Urban | Udupi | Udupi CMC | 1 | 0 | 0 | 0 | 18 | 1 |
| Rural | Udupi | Brahmavara | 14 | 1 | 0 | 53 | 199 | 2 |
| Rural | Udupi | Bynduru | 8 | 1 | 2 | 58 | 215 | 0 |
| Rural | Udupi | Hebri | 5 | 3 | 0 | 7 | 78 | 0 |
| Rural | Udupi | Kapu | 0 | 1 | 0 | 3 | 137 | 3 |
| Rural | Udupi | Karkala | 16 | 1 | 2 | 26 | 207 | 1 |
| Rural | Udupi | Kundapura | 10 | 1 | 0 | 125 | 302 | 8 |
| Rural | Udupi | Udupi | 7 | 1 | 1 | 19 | 78 | 2 |
| | **Udupi Total** | | **61** | **9** | **5** | **295** | **1261** | **21** |
| | **Grand Total** | | **170** | **32** | **11** | **718** | **2392** | **36** |

D. Rain